ಸಾಕ್ಷಿಯನ್ನು ದಿನಾಂಕಃ 09/04/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ**

ಚಾಂದಸಾಬ ಮದುವೆ ಆಗಿಲ್ಲ ಎಂದು ತೋರಿಸಲು ಯಾರಾದರೂ ಸಾಕ್ಷಿದಾರರು ಇದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಸಂಬಂಧಿಕರಲ್ಲಿ ಚಾಂದಸಾಬ ರವರು ಲಗ್ನ ಆಗಿಲ್ಲ ಎಂದು ತೋರಿಸಲು ಸಾಕ್ಷಿ ಮಾಡಿಸುತ್ತೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ಮಕ್ತುಂಸಾಬ 1989 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಚಾಂದಸಾಬ ರವರು ನಿಮ್ಮ ತಂದೆ ತೀರಿಕೊಳ್ಳುವುದಕ್ಕಿಂತ ಮುಂಚೆ ತೀರಿಕೊಂಡಿದ್ದಾರೆ ಎಂದರೆ ನನಗೆ ನೆನಪಿಲ್ಲ. ಚಾಂದಸಾಬ ತೀರಿಕೊಂಡ ನಂತರ ನಿಮ್ಮ ತಂದೆ ಈ ಎಲ್ಲಾ ಆಸ್ತಿಗಳಿಗೆ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ಐಟಮ್ ನಂ.1 ಮತ್ತು 2 ಮತ್ತು ಮನೆಗೆ ಪ್ರತಿವಾದಿಯ ಹೆಸರುಗಳು ರೆವಿನ್ಯೂ ದಾಖಲಾತಿಗಳಲ್ಲಿ 1976 ರಲ್ಲಿ ಬಂದಿವೆ ಎಂದರೆ ನನಗೆ ಗೊತ್ತಿಲ್ಲ. 1976 ರಲ್ಲಿ ಪ್ರತಿವಾದಿಯರ ಹೆಸರು ರೆವಿನ್ಯೂ ದಾಖಲಾತಿಗಳಲ್ಲಿ ಬಂದಿದ್ದಕ್ಕೆ ನಿಮ್ಮ ತಂದೆ ಜೀವಂತ ಇದ್ದಾಗ ಪ್ರಶ್ನಿಸಿರುವುದಿಲ್ಲ ಎಂದರೆ ಪ್ರಶ್ನಿಸಿಲ್ಲ ಎಂದು ಹೇಳುತ್ತಾರೆ.

ನಿಮ್ಮ ತಂದೆ ತೀರಿಕೊಂಡ ನಂತರ ವಾರಸಾ ಪ್ರಮಾಣ ಪತ್ರ ತಹಶೀಲ್ದಾರ ಕಚೇರಿಯಲ್ಲಿ ತೆಗಿಸಿರುವುದಿಲ್ಲ. ನಿಮ್ಮ ತಂದೆ ತೀರಿಕೊಂಡ ನಂತರ ಇಲ್ಲಿವರೆಗೆ ನೀವು ವಾರಸಾ ಪ್ರಮಾಣ ಪತ್ರ ತಹಶೀಲ್ದಾರ ಕಚೇರಿಯಲ್ಲಿ ತೆಗಿಸಿರುವುದಿಲ್ಲ ಎಂದರೆ ಸರಿ. ನಿಮ್ಮ ತಂದೆ ತೀರಿಕೊಳ್ಳುವುದಕ್ಕಿಂತ ಮುಂಚೆ ನಿಮ್ಮ ಮದುವೆ ಆಗಿತ್ತು ಎಂದರೆ ಸರಿ. ನಿಮಗೆ ಮದುವೆ ಮಾಡಿಕೊಟ್ಟಾಗಿನಿಂದ ನೀವು ಗಂಡನ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ಆದರೆ ನಾನು ತವರುಮನೆಗೆ ಬಂದು ಹೋಗುತ್ತಿದ್ದೆ ಎಂದು ಹೇಳುತ್ತಾರೆ. ನಿಮ್ಮ ತಂದೆ ತೀರಿಕೊಳ್ಳುವುದಕ್ಕಿಂತ ಮುಂಚೆಯಿಂದ ಇಲ್ಲಿಯವರೆಗೆ ಪ್ರತಿವಾದಿಗಳೆ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯಲ್ಲಿ ಕಬ್ಜಾ

ವಹಿವಾಟು ಹೊಂದಿದ್ದೀರಿ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಇದ್ದಾವೆ ಎಂದು ಹೇಳುತ್ತಾರೆ. ನಾನು ದಾವಾ ಆಸ್ತಿಯ ಆದಾಯ ತೆರಿಗೆಯ ರಶೀದಿಯನ್ನು ಹಾಜರು ಪಡಿಸಿಲ್ಲ. ದಾವಾ ಆಸ್ತಿಯಲ್ಲಿ ಬೆಳೆದ ಬೆಳಗಳಲ್ಲಿ ಮಾರಾಟ ಮಾಡಿದ ಬಗ್ಗೆ ರಶೀದಿಗಳು ಇವೆಯಾ ಎಂದರೆ ಸಾಕ್ಷಿ ಎಲ್ಲಾ ನನ್ನ ಅಣ್ಣನ ಹತ್ತಿರ ಇತ್ತು ಎಂದು ಹೇಳುತ್ತಾರೆ. ನನ್ನ ಅಣ್ಣ ತಮ್ಮ ಎಲ್ಲವನ್ನು ಅವರೆ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವೆಲ್ಲರೂ ಕೂಡಿ ಇದ್ದೆವು ಎಂದು ಹೇಳುತ್ತಾರೆ. ನಾನು ನನ್ನ ತವರುಮನೆಯಲ್ಲಿ ಸಾಕಷ್ಟು ಬಾರಿ 2-3 ತಿಂಗಳು ವಾಸವಾಗಿದ್ದೇನೆ. ನನ್ನ ಮನೆಯವರು ಮಿಲಟರಿಯಲ್ಲಿ ಕೆಲಸ ಮಾಡುತ್ತಿದ್ದರು, ಆಗ ನಾನು ತವರುಮನೆಯಲ್ಲಿ ಬಂದು ವಾಸವಾಗುತ್ತಿದ್ದೆ. ನೀವು ತವರುಮನೆಗೆ ಬಂದಾಗ ದಾವಾ ಆಸ್ತಿಯಲ್ಲಿ ಬಿತ್ತಲು ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಆಳುಗಳು ಇದಿದ್ದರಿಂದ ನಾನು ಹೋಗುತ್ತಿರಲಿಲ್ಲ ಎಂದು ಹೇಳುತ್ತಾರೆ. ನಿಮ್ಮ ಮನೆತನದಲ್ಲಿ ಹೆಣ್ಣು ಮಕ್ಕಳಿಗೆ ಜಮೀನಿಗೆ ಹೋಗುವ ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನನ್ನ ಅಕ್ಕತಂಗಿಯರು ಹೋಗುತ್ತಿದ್ದರು ಎಂದು ಹೇಳುತ್ತಾರೆ. ನೀವು ನಿಮ್ಮ ತಾಯಿ ಮತ್ತು ನನ್ನ ಅಕ್ಕತಂಗಿಯರು ಹೊಲಕ್ಕೆ ಹೋಗುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಆಸ್ತಿ ಐಟಮ್ ನಂ.1 ಮತ್ತು 2 ಮತ್ತು ಮನೆಯಲ್ಲಿ ನಿಮಗೆ ಅರ್ಧ ಹಿಸ್ಸೆ ಇದೆ ಮತ್ತು ಪ್ರತಿವಾದಿಗಳಿಗೆ ಅರ್ಧ ಹಿಸ್ಸೆ ಇದೆ ಎಂದರೆ ಹೌದು ಎಂದು ಹೇಳುತ್ತಾರೆ. ದಾವಾ ಆಸ್ತಿಗಳಿಗೆ ರೆವಿನ್ಯೂ ದಾಖಲಾತಿಗಳಿಗೆ ನಿಮ್ಮ ಹೆಸರು ಹಚ್ಚಲು ಅರ್ಜಿ ಕೊಟ್ಟು ಪ್ರಯತ್ನ ಮಾಡಿರುವುದಿಲ್ಲ. ಇಲ್ಲಿಯವರೆಗೆ ನೀವು ಉತಾರದಲ್ಲಿ ಹೆಸರು ಹಚ್ಚಿಕೊಳ್ಳಲು ಮತ್ತು ಕಬ್ಜಾ ಪಡೆಯಲು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿ. ರೆವಿನ್ಯೂ ದಾಖಲಾತಿಗಳಲ್ಲಿ ನಿಮ್ಮ ಹೆಸರು ಹಚ್ಚಿಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಹೆಸರುಗಳು ಇದ್ದವು, ಫೋರ್ಜರಿ ಸಹಿ ಮಾಡಿ ನಮ್ಮ ಹೆಸರು ತೆಗೆದಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ವಾರಸಾ

ಪ್ರಕಾರ ನಮ್ಮೆಲ್ಲರ ಹೆಸರುಗಳು ರೆವಿನ್ಯೂ ದಾಖಲಾತಿಗಳಲ್ಲಿ ಇದ್ದವು ಎಂದು ಹೇಳುತ್ತಾರೆ. ನಿಮ್ಮ ಹೆಸರುಗಳು ಇದ್ದವು ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಸುಮಾರು 40 ವರ್ಷದಿಂದ ರೆವಿನ್ಯೂ ದಾಖಲಾತಿಗಳಲ್ಲಿ ನಿಮ್ಮ ಹೆಸರು ಇಲ್ಲ ಎಂದರೆ ಸರಿಯಲ್ಲ. 40 ವರ್ಷದಿಂದ ನಿಮ್ಮ ಹೆಸರು ರೆವಿನ್ಯೂ ದಾಖಲಾತಿಯಲ್ಲಿ ಇಲ್ಲದೆ ಇರುವುದು ನಿಮಗೆ ಗೊತ್ತಿತ್ತು ಎಂದರೆ ಸರಿ. ನಿಮ್ಮ ಹೆಸರು ರೆವಿನ್ಯೂ ದಾಖಲಾತಿಗಳಿಂದ ತೆಗೆದು ಹಾಕಿದ್ದಾರೆ ಎಂದು ಈ ಪ್ರಕರಣ ದಾಖಲಿಸಿದ ನಂತರ ಗೊತ್ತಾಯಿತು. ಅದಕ್ಕಿಂತ ಪೂರ್ವದಲ್ಲಿ ನನಗೆ ಗೊತ್ತಿರಲಿಲ್ಲ. 40 ವರ್ಷದಿಂದ ನಿಮ್ಮ ಹೆಸರು ಇಲ್ಲ ಎಂದು ಗೊತ್ತಿದ್ದರೂ ಸಹ ಈಗ ಗೊತ್ತಿಲ್ಲ ಎಂದು ದಾವೆ ಹಾಕಿದ್ದೀರಿ ಎಂದರೆ ಸರಿಯಲ್ಲ.

ಐಟಮ್ ನಂ.3 ಮತ್ತು 4 ಜಮೀನುಗಳು ಗಂಗಿಮಡಿ ರಸ್ತೆಯಲ್ಲಿ ಇವೆ ಎಂದರೆ ಸರಿ. ಸದರಿ ಜಮೀನುಗಳು ಪ್ರತಿವಾದಿಗಳು ಈ ದಾವೆ ಹಾಕುವುದಕ್ಕಿಂತ 15 ದಿನ ಮುಂಚೆ ಮಾರಾಟ ಮಾಡಿದ್ದಾರೆ ಎಂದರೆ ವಾದಿ ಪರ ವಕೀಲರು ಅವರು ಪ್ರತಿವಾದ ಪತ್ರದಲ್ಲಿ ಈ ಬಗ್ಗೆ ಯಾವುದೇ ಪ್ಲಿಡೀಂಗ್ ಇಲ್ಲದೆ ಇರುವುದರಿಂದ ಈ ಪ್ರಶ್ನೆ ತೆಗೆದುಕೊಳ್ಳಬಾರದು ಎಂದು ವಕೀಲರು ತಕರಾರು ಮಾಡಿದ್ದು, ಈ ನ್ಯಾಯಾಲಯವು ಸದರಿ ಪ್ರಶ್ನೆಗೆ ಉತ್ತರ ತೆಗೆದುಕೊಂಡಿರುವುದಿಲ್ಲ ಏಕೆಂದರೆ ಅವರ ಪ್ರತಿವಾದ ಪತ್ರದಲ್ಲಿ ಇದರ ಬಗ್ಗೆ ಪ್ಲಿಡೀಂಗ್ ಇಲ್ಲ. ಈ ಪ್ರಕರಣದಲ್ಲಿ ಡಿಕ್ರಿ ಆದ ನಂತರ ಸದರಿ ಆಸ್ತಿಗಳನ್ನು ಪಾಲು ಮಾಡಿಕೊಳ್ಳಲು ಎಫ್ ಡಿ ಪಿ ಹಾಕಿಕೊಂಡಿದ್ದೇವು ಎಂದರೆ ಸರಿ. ಸದರಿ ಎಫ್ ಡಿ ಪಿ ನಂ. ದಲ್ಲಿ ಮಧುಸಾ ಶಂಕರಸಾ ಖಟವಟೆಯವರು ನಾನು ದಾವಾ ಆಸ್ತಿಯನ್ನು ಖರೀದಿಸಿದ್ದೇನೆಂದು ಅರ್ಜಿ ಹಾಕಿದ್ದರು ಎಂದರೆ ಸರಿ.

ನಿಮ್ಮ ತಂದೆ ಸದರಿ ಆಸ್ತಿಯಲ್ಲಿ ಅಂದರೆ ಐಟಮ್ ನಂ.3 ಮತ್ತು 4 ರಲ್ಲಿ tenante ಆಗಿದ್ದರು ಮತ್ತು ಸದರಿ ಆಸ್ತಿ ಅವರಿಗೆ ಗ್ರ್ಯಾಂಟ್ ಆಗಿತ್ತು ಎಂದು ಕೇಳುತ್ತಿದ್ದಾರೆ ಆದರೆ ವಾದಿ ಪರ ವಕೀಲರು ಅವರು ಪ್ರತಿವಾದ ಪತ್ರದಲ್ಲಿ ಈ ಬಗ್ಗೆ

ಯಾವುದೇ ಪ್ಲಿಡೀಂಗ್ ಇಲ್ಲದೆ ಇರುವುದರಿಂದ ಈ ಪ್ರಶ್ನೆ ತೆಗೆದುಕೊಳ್ಳಬಾರದು ಎಂದು ವಕೀಲರು ತಕರಾರು ಮಾಡಿದ್ದು, ಈ ನ್ಯಾಯಾಲಯವು ಸದರಿ ಪ್ರಶ್ನೆಗೆ ಉತ್ತರ ತೆಗೆದುಕೊಂಡಿರುವುದಿಲ್ಲ. 1 ಮತ್ತು 3 ನೇ ವಾದಿಯರು ಉರ್ದುದಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ನಾನು ಇಂಗ್ಲೀಷನಲ್ಲಿ ಸಹಿ ಮಾಡುತ್ತೇನೆ. ವಾದಿಗೆ ವಾದ ಪತ್ರ ತೋರಿಸಿ ಅದರಲ್ಲಿರುವ ನಿಮ್ಮ ಮತ್ತು ಉಳಿದ ಇಬ್ಬರ ವಾದಿಯರ ಸಹಿ ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಆದರೆ 1 ಮತ್ತು 3 ನೇ ವಾದಿಯರ ಸಹಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಾವೆ ಹಾಕುವಾಗ ನಿಮ್ಮ ಮೂರು ಜನರ ಸಹಿ ವಾದ ಪತ್ರದಲ್ಲಿ ತೆಗೆದುಕೊಂಡಿದ್ದಾರೆ ಎಂದರೆ ಸರಿ. ವಾದ ಪತ್ರದಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 1 ಎಂದು ಗುರುತಿಸಲಾಯಿತು. ನಿಪಿಃ 1 ರಿಂದ 4 ಉತಾರದಲ್ಲಿ ಪ್ರತಿವಾದಿಗಳ ಹೆಸರು ಇವೆ ಎಂದರೆ ಸರಿ. ನೀವು ಮೂರು ಜನ ವಾದಿಗಳು ತಹಶೀಲ್ದಾರ ಕಚೇರಿಗೆ ಹೋಗಿ ಕಬೂಲಿ ಜವಾಬ ಕೊಟ್ಟು ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಫಾತಿಮಾ ಮಹ್ಮಮದಗೌಸ ಇವರು ನನಗೆ ಅಕ್ಕನಾಗಬೇಕು. ನೀವೆಲ್ಲರೂ ಸೇರಿ ಸಹಿ ಮಾಡಿದ್ದೀರಿ ಎಂದರೆ ಇಲ್ಲ ಎಂದು ಹೇಳುತ್ತಾರೆ. ತಹಶೀಲ್ದಾರ ಆಫೀಸನಲ್ಲಿ ನಿಮ್ಮ ಜವಾಬ ಸಹ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿವೆಲ್ಲರೂ ಹೋಗಿ ನಿಮ್ಮ ಗಂಡನ ಮನೆಯಲ್ಲಿ ಆರಾಮ ಇದ್ದೀರಿ , ಆಸ್ತಿಯಲ್ಲಿ ಪಾಲು ಬೇಡ ಎಂದು 100 ರೂಪಾಯಿ ಬಾಂಡ ಪೇಪರ ಮೇಲೆ ಬರೆದು ಹಕ್ಕು ಬಿಟ್ಟು ಕೊಟ್ಟಿದ್ದೀರಿ ಎಂದರೆ ಇಲ್ಲ ಎಂದು ಹೇಳುತ್ತಾರೆ. ಈಗ ಆಸ್ತಿಯ ಬೆಲೆ ಹೆಚ್ಚಾಗಿದ್ದರಿಂದ ಹಕ್ಕು ಬಿಟ್ಟು ಕೊಟ್ಟಿದ್ದರೂ ಸಹ ನಮಗೂ ಪಾಲು ಇದೆ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರ ಸರಿಯಲ್ಲ. ನಿಮಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ನಿಮ್ಮೆಲ್ಲರ ಸಹಿಯೂ ಹಕ್ಕು ಬಿಟ್ಟ ಕೊಟ್ಟ ಪತ್ರದಲ್ಲಿ ಇವೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
09.04.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**